ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 1, July-August 2021, 8-15
©*IIMRD*, Mysuru

IIMRD JOURNALS

www.iimrd.com

# ತ.ರಾ.ಸು ಕಾದಂಬರಿಗಳಲ್ಲಿ ಸ್ತ್ರೀವಾದಿ ನೆಲೆಯ ಭಿನ್ನ ಚಿಂತನೆಗಳು

**ವೆಂಕೋಬರಾವ್ ಎಂ.**[*]

[*] ಕನ್ನಡ ಸಂಶೋಧನಾರ್ಥಿ, ಜೈನ್ ಡೀಮ್ಡ್ ಟು ಬಿ ಯೂನಿವರ್ಸಿಟಿ, ಬೆಂಗಳೂರು.

***ಸಾರಾಂಶ* (Abstract)**

*ಹೊಸಗನ್ನಡ ಸಾಹಿತ್ಯ ಕಾದಂಬರಿ ಕ್ಷೇತ್ರದಲ್ಲಿ ಹಿರಿಯ ಸಾಧನೆ ಮಾಡಿದ ಕೆಲವೇ ಕೃತಿಕಾರರಲ್ಲಿ ತ.ರಾ.ಸು ಒಬ್ಬರು ಅವರು ಕಾದಂಬರಿ ಕ್ಷೇತ್ರಕ್ಕೆ ನೀಡಿದ ಕೊಡುಗೆ ಸತ್ವ ಮತ್ತು ಸಂಖ್ಯೆ ಎರಡರ ದೃಷ್ಟಿಯಿಂದಲೂ ಗಮನಾರ್ಹವಾದುದಾಗಿದೆ. ಅವರ ಕಾದಂಬರಿಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುವ ಬಹುದೊಡ್ಡ ಅಗತ್ಯ ಇಂದಿದೆ. ತ.ರಾಸು ಅವರು ಸಾಮಾಜಿಕ, ಐತಿಹಾಸಿಕ ಮತ್ತು ಪೌರಾಣಿಕ ಕಾದಂಬರಿಗಳನ್ನು ಬರೆದಿದ್ದಾರೆ. ಪ್ರಸ್ತುತ ಸಂಶೋಧನೆಯಲ್ಲಿ ನಾಗರಹಾವು, ಬಿಡುಗಡೆಯ ಬೇಡಿ, ಚಂದನದ ಗೊಂಬೆ, ಪಂಜರದ ಪಕ್ಷಿ ಮತ್ತು ಹೆಣ್ಣು ಕಟ್ಟಿದ ಮನೆ ಕಾದಂಬರಿಗಳಲ್ಲಿ ಸ್ತ್ರೀವಾದಿ ನೆಲೆಯನ್ನು ತಿಳಿಯಲು ಪ್ರಯತ್ನಿಸಿದ್ದೇನೆ.*

***ಮುಖ್ಯ ಪದಗಳು* (Keywords) :** ತ.ರಾ.ಸು, ಸ್ತ್ರೀವಾದಿ, ಕಾದಂಬರಿ, ಕನ್ನಡ ಸಾಹಿತ್ಯ.

**ಪೀಠಿಕೆ**

ತ.ರಾ.ಸು ರವರು ಕನ್ನಡದ ಪ್ರಸಿದ್ಧ ಕಾದಂಬರಿಕಾರರಲ್ಲೊಬ್ಬರು. ಅವರ ಕಾದಂಬರಿಗಳಲ್ಲಿ ಉತ್ಕಟತೆ, ಭಾವತೀವ್ರತೆ ಎದ್ದು ಕಾಣುತ್ತದೆ. ಇದು ಜನಪ್ರಿಯತೆಗೆ ಕಾರಣವಾದರೂ, ಹಲವೊಮ್ಮೆ ಇದು ದೋಷವಾಗುತ್ತದೆ. ಸನ್ನಿವೇಶಕ್ಕೆ ಸಲ್ಲದ ವರ್ಣಮಯವಾದ ಅಥವಾ ಉದ್ವೇಗದ ಭಾಷೆಗೆ ಎಡೆಮಾಡಿಕೊಡುತ್ತದೆ. ಆದರೆ ಈ ಗುಣವೇ ಅವರು ಸ್ನೇಹ, ಪ್ರೇಮ, ವಿಶ್ವಾಸ, ಅಭಿಮಾನಗಳ ತಂಪನ್ನೂ, ಸತ್ವವನ್ನೂ ಒಂದು ಸನ್ನಿವೇಶದಲ್ಲಿ ಹಿಡಿದಿಡಲು ಸಾಧ್ಯವಾಯಿತು. ಎಲ್ಲಕ್ಕಿಂತ ಮೊದಲಾಗಿ ತ.ರಾ.ಸು ಹೃದಯವಂತಿಕೆಯ ಕಾದಂಬರಿಕಾರ.

ತ.ರಾ.ಸು. ರವರ ನಾಗರಹಾವು, ಎರಡು ಹೆಣ್ಣು ಒಂದು ಗಂಡು, ಸರ್ಪಮತ್ಸರ ಮೂರು ಕಾದಂಬರಿಗಳ ವಸ್ತು ಒಂದೇ. ಸಮಾಜದ ಮಧ್ಯದಲ್ಲಿ ಬಾಳಿ ಬದುಕಬೇಕಾಗಿರುವ ವ್ಯಕ್ತಿಯ ಆಸೆ–ಆಕಾಂಕ್ಷೆಗಳು, ಸಮಾಜ ನಂಬಿದ ಮೌಲ್ಯಗಳಿಗೆ ಬಲಿಯಾಗುತ್ತ ನಡೆದಾಗ, ಆ ವ್ಯಕ್ತಿಯ ಜೀವನ ಹೇಗೆ ದುರಂತದಲ್ಲಿ ಅಂತ್ಯವಾಗುತ್ತದೆ ಎನ್ನುವುದಕ್ಕೆ ಮೇಲಿನ ಮೂರು ಕಾದಂಬರಿಗಳು ಒಂದು ಉದಾಹರಣೆಯಾಗಿ ನಿಲ್ಲುತ್ತವೆ. ಕಾದಂಬರಿಗಳ ನಾಯಕ 'ರಾಮಾಚಾರಿ' ಅವನ ಬದುಕಿನ ಏರಿಳಿತಗಳೇ ಈ ಕಾದಂಬರಿಗಳ ವಸ್ತು. ಪ್ರತಿಯೊಬ್ಬ ವ್ಯಕ್ತಿಯ ಮಾನಸಿಕ ವ್ಯಕ್ತಿತ್ವದ ಮೇಲೆ ವ್ಯಕ್ತಿಯ ಹುಟ್ಟು,

*Please cite this article as:* *ವೆಂಕೋಬರಾವ್ ಎಂ. (2021).* ತ.ರಾ.ಸು ಕಾದಂಬರಿಗಳಲ್ಲಿ ಸ್ತ್ರೀವಾದಿ ನೆಲೆಯ ಭಿನ್ನ ಚಿಂತನೆಗಳು. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(1). ಪು.ಸಂ. 8–15*

ಗೃಹಸನ್ನಿವೇಶ, ಸಾಮಾಜಿಕ ವಾತಾವರಣ, ಶಿಕ್ಷಣ ಮೊದಲಾದವುಗಳು ಪ್ರಭಾವ ಬೀರುತ್ತದೆ. ವ್ಯಕ್ತಿಯೊಬ್ಬನ ವ್ಯಕ್ತಿತ್ವದ ಆಧಾರ ಮೇಲೆ ಆ ವ್ಯಕ್ತಿ ಸಮಾಜಕ್ಕೆ ಉಪಕಾರಿಯೋ, ಅಪಕಾರಿಯೋ ಆಗುತ್ತಾನೆ. ಒಂದು ಮುಖ ಪ್ರಧಾನವಾದಾಗ ಇನ್ನೊಂದು ಮುಖ ಸಂಪೂರ್ಣವಾಗಿ ಸ್ಪಷ್ಟವಾಗುವುದಿಲ್ಲ. ಆದರೆ ವ್ಯಕ್ತಿಯ ಸುಪ್ತ ಚಿತ್ರದಲ್ಲಿ ಎಲ್ಲೋ ಹುದುಗಿದ್ದ ಭಾವ ವ್ಯಕ್ತಿಯ ಜೀವನದ ಕೆಲವು ಘಟ್ಟಗಳಲ್ಲಿ ಕಾಣಿಸಿಕೊಂಡು ಆತನ ಚಿತ್ರದ ಹೊಯ್ದಾಟ, ತೊಯ್ದಾಟ, ಆಕರ್ಷಣೆ, ವಿಕರ್ಷಣೆ, ಘರ್ಷಣೆ – ಸಮನ್ವಯಗಳಿಗೆ ಕಾರಣವಾಗುತ್ತದೆ, ಹಾಗೆಯೇ ತ.ರಾ.ಸು ರವರ ಮತ್ತೊಂದು ಕಾದಂಬರಿ ಬಿಡುಗಡೆಯ ಬೇಡಿಯೂ ಸಹ ಉತ್ತಮ ಕಾದಂಬರಿಗಳಲ್ಲಿ ಒಂದಾಗಿದೆ. 'ಬಿಡುಗಡೆಯ ಬೇಡಿ' ಕಾದಂಬರಿಯಲ್ಲಿ ಭಾರತೀಯ ಸಂದರ್ಭದಲ್ಲಿ ಸ್ತ್ರೀ ಸ್ವಾತಂತ್ರ್ಯ ಒಂದು ಸಮಸ್ಯೆಯಾಗಿ ಕಂಡಿರುವುದೇ ಹೆಚ್ಚು. ಸಂಪ್ರದಾಯಬದ್ಧ ವ್ಯವಸ್ಥೆಯಲ್ಲಿ ಬಿಡುಗಡೆಯನ್ನು ಬಯಸಿದ ಹೆಣ್ಣು, ಹೇಗೆ ಅದರಲ್ಲಿ ಭಾಗಿಯಾಗುತ್ತಾಳೆ ಎನ್ನುವುದನ್ನೇ ಕಾದಂಬರಿ ತನ್ನ ವಸ್ತುವನ್ನಾಗಿಸಿದೆ. ಪ್ರಭಾವತಿ ಕಾದಂಬರಿಯ ಕೇಂದ್ರ ಬಿಂದು. ಶ್ರೀಮಂತ ಮನೆತನದಲ್ಲಿ ಜನಿಸಿದ ಪ್ರಭಾವತಿ ವೈಚಾರಿಕ ಮನೋಭಾವನೆಯಿಂದ ಬೆಳೆದು, ತಾನು ಪ್ರೀತಿಸಿದ ಬಡ ಶಾಂತಾರಾಮರನ್ನು ಲಗ್ನವಾಗಿ ಮುಂಬಯಿ ಸೇರುತ್ತಾಳೆ. ಅಲ್ಲಿ ಶಾಂತಾರಾಮನಿಂದ ದೂರಾಗಿ 'ಟೈಪು' ಮಾಡುವ ವೃತ್ತಿಯನ್ನು ಕೈಗೊಂಡು ಮುಂಬೈ ಬದುಕಿನ ಒಂದಂಗವಾಗಿ ಪ್ರಭಾವತಿ ಯಾವುದನ್ನು ಬಿಡುಗಡೆಯೆಂದು ತಿಳಿದಿದ್ದಳೋ ಅದು ಬೇಡಿಯಾಗಿ ಪರಿಣಮಿಸುತ್ತದೆ. ಪ್ರಗತಿಶೀಲ ಧೋರಣೆಯ ಹಿನ್ನೆಲೆಯಲ್ಲಿ ರಚಿತವಾದ ಈ ಕಾದಂಬರಿ ಪ್ರಭಾವತಿಯನ್ನು ಸಾಂಕೇತಿಕವಾಗಿಟಕ್ಟುಕೊಂಡು ಭಾರತೀಯ ನಾರಿಯ ತುಡಿತಗಳನ್ನು ಹೊರ ಹಾಕಿದ್ದಾರೆ. ಪುರುಷಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಅತಂತ್ರಳು. ಪ್ರಭಾವತಿಯ ಮಾನಸಿಕ ಬೆಳವಣಿಗೆಯಲ್ಲಿಯೇ ಕಾದಂಬರಿಕಾರರ ಹಿಡಿತ ಸಡಿಲಿದೆ. ಸ್ತ್ರೀ ಸ್ವಾತಂತ್ರ್ಯದ ನೆಲೆಯಲ್ಲಿಯೇ ದ್ವಂದ್ವವಿದೆಯೆಂಬುದನ್ನು ಕಾದಂಬರಿ ಧ್ವನಿಸುತ್ತದೆ. ಇಂದಿನ ವೈಚಾರಿಕ ದೃಷ್ಟಿಕೋನದಲ್ಲಿಯೇ ಲೋಪವಿದೆಯೆಂಬುದನ್ನು ಕಾದಂಬರಿ ಅರ್ಥಪೂರ್ಣವಾಗಿ ಬಿಂಬಿಸುತ್ತದೆ. ಅಹಂ ಪ್ರಜ್ಞಾಪ್ರವಾಹ ತಂತ್ರದಿಂದ ಕಾದಂಬರಿ ಓದಿಸಿಕೊಂಡು ಹೋಗುತ್ತದೆ.

'ಚಂದನದ ಗೊಂಬೆ' ತ.ರಾ.ಸು ಅವರ ಜನಪ್ರಿಯ ಕಾದಂಬರಿಗಳಲ್ಲೊಂದು. ಅನಾಥ ಹೆಣ್ಣನ್ನು ಸಮಾಜ ಹೇಗೆ ತನ್ನ ಸ್ವಾರ್ಥಕ್ಕೆ ಬಳಸಿಕೊಂಡು ಅವಳ ದುರಂತಕ್ಕೆ ಕಾರಣವಾಗುತ್ತದೆ ಎಂಬುದನ್ನು ತಿಳಿಯಪಡಿಸುವುದೇ ಇದರ ಕಥಾವಸ್ತು. "ಚಂದನದ ಗೊಂಬೆ" ಕಾದಂಬರಿಯ ತಲೆಬರಹದ ಕುರಿತು ಲೇಖಕರು ತಾವೇ ಮುನ್ನುಡಿಯಲ್ಲಿ ಅದಕ್ಕೆ ಸಮರ್ಥನೆಯನ್ನೂ ನೀಡಿ "ಚಂದನದ ಗೊಂಬೆ" ಅದು ಪಟ್ಟಕ್ಕೆ ಕೂಡಲೂ ಬಯಸುವುದಿಲ್ಲ. ನಮ್ಮ ಬಯಕೆ ಸ್ಥಾಪನೆ–ವಿಸರ್ಜನೆಗಳೆರಡಕ್ಕೂ ಕಾರಣವಾಗುತ್ತದೆ. ಕಾದಂಬರಿಯ ನಾಯಕಿ ರತ್ನಮ್ಮಳ ಬದುಕು "ಚಂದನದ ಗೊಂಬೆ"ಯಂತೆ ತನ್ನ ಇಚ್ಛೆಗೆ ಅಧೀನವಾಗಿ ನಡೆಯದೆ, ಸುತ್ತ ಇರುವ ಜನಗಳ ಬದುಕಿಗನುಸಾರವಾಗಿ ನಡೆದು ತನ್ನ ಅಂತ್ಯ ಕಂಡುಕೊಳ್ಳುತ್ತದೆ. ಈ ದೃಷ್ಟಿಯಿಂದ ಕಾದಂಬರಿಯ ಶೀರ್ಷಿಕೆ ಸಾರ್ಥಕ. ಕಾದಂಬರಿಯನ್ನು ಲೇಖಕರು ಮೂರು ಭಾಗಗಲ್ಲಿ ವಿಂಗಡಿಸಿ, 'ಚಂದನದ ಗೊಂಬೆ', 'ಉಸುರುಳ್ಳ', 'ಸೂತ್ರ ಕಿತ್ತ ಪಟ' ಎಂದು ಹೆಸರಿಸಿದ್ದಾರೆ. ಚಂದನದ ಗೊಂಬೆ ಭಾಗದಲ್ಲಿ ಸೀತಾರಾಮು–ರತ್ನಮ್ಮರ ಮದುವೆ, ದಾಂಪತ್ಯ ಜೀವನದ ಚಿತ್ರ ಬಂದರೆ, ವಿಠೋಬ, ಈರಮ್ಮ, ಚಿನ್ನೋಬಯ್ಯ – ಇವರು ಸೀತಾರಾಮು ಬದುಕಿದ್ದಾಗ ರತ್ನಮ್ಮನೊಂದಿಗಿರಿಸಿಕೊಂಡಿದ್ದ

ಸಂಬಂಧಗಳ ಸ್ವರೂಪವನ್ನು 'ಉಸುರುಳ್ಳಿ' ಭಾಗ ಹೊಂದಿದೆ. 'ಸೂತ್ರ ಕಿತ್ತ ಪಟ' ಹೆಸರೇ ಸೂಚಿಸುವಂತೆ ಜೀವನಾಧಾರವಿಲ್ಲದೆ, ಅನಾಥೆಯಾಗಿ ಕಟುಟೀಕೆಯ ಬಿರುಗಾಳಿಗೆ ತತ್ತರಿಸಿದ ಕೊನೆಯ ದಿನಗಳ ಚಿತ್ರಣ ಇಲ್ಲಿದೆ. ತ.ರಾ.ಸು ರವರ ಕಾದಂಬರಿಗಳಲ್ಲಿ ಅಸಹಾಯಕತೆಯಲ್ಲಿ ಸಿಲುಕಿರುವ ಸ್ತ್ರೀಯರ ಬದುಕು ಸುಧಾರಿಸಬೇಕು. ಸುಧಾರಣೆ ಕಂಡುಬಂದರೆ ಹೆಣ್ಣಿನ ಬದುಕು ಉತ್ತಮಗೊಳ್ಳುತ್ತದೆಂಬ ಆಶಯವನ್ನು ವ್ಯಕ್ತಪಡಿಸುತ್ತಾರೆ. ತ.ರಾ.ಸು. ಅವರ ಎಲ್ಲಾ ಸಾಮಾಜಿಕ ಕಾದಂಬರಿಗಳನ್ನು ಸ್ತ್ರೀವಾದಿ ನೆಲೆಯಲ್ಲಿ ನಿಂತು ನೋಡಿದಾಗ ಎಲ್ಲಾ ನಿಕೃಷ್ಟ ಸನ್ನಿವೇಶಕ್ಕೆ ಪುರುಷನೇ ನೇರವಾಗಿ ಕಾರಣಕರ್ತನಾಗುತ್ತಾನೆ. ಸ್ತ್ರೀವಾದಿ ಚಿಂತನೆಯ ಪ್ರಕಾರ ಸ್ತ್ರೀ ಗುಲಾಮಗಿರಿಗಿಂತ ಪುರುಷ ಪ್ರಮುಖ ಒತ್ತಾಸೆ. ಹಾಗಾಗಿ ಈ ಶೋಷಣೆಯ ಮತ್ತು ಸಾಮಾಜಿಕ ವ್ಯವಸ್ಥೆಯ ವಕ್ತಾರನಾದ ಪುರುಷನಲ್ಲಿ ಭಾವನಾತ್ಮಕ ಬದಲಾವಣೆ ಸಾಗಬೇಕು ಎನ್ನುವ ಹಿನ್ನೆಲೆಯಲ್ಲಿ ಗ್ರಹಿಸಲಾಗಿದೆ. ಸ್ತ್ರೀ ಒಂದು ಸರಕಾಗಿ ಮಾರ್ಪಟ್ಟಿರುವುದು ಪುರುಷನಿಗೆ ಮೇಲುಗೈ ಸಾಧಿಸಿದಂತಾಗಿದೆ. ತಾನು ಹೂಡುವ ಬಂಡವಾಳ ರೂಪದ ಸಾಧನ ಸ್ತ್ರೀ ಆಗಿರುವುದರಿಂದ ಸಾಮಾಜಿಕ ಮತ್ತು ಸಾಂಸ್ಕೃತಿಕವಾದ ಮೌಲ್ಯಗಳು ಕುಸಿಯುವಂತಾಗಿದೆ. ಹೆಣ್ಣಿನ ಅಂತರಂಗದ ತಾಕಲಾಟ, ಸಂಘರ್ಷ ಮತ್ತು ಭಿನ್ನ ಸಾಮಾಜಿಕ ಸಮಸ್ಯೆಗಳಿಂದ ಸ್ತ್ರೀಯನ್ನು ರಕ್ಷಿಸಬೇಕಾದ ಪುರುಷ ಸಮಾಜದ ತಲೆಹಿಡುಕರು ತಮ್ಮ ಬದುಕು ಸಾಗಿಸುವ ಹಿನ್ನೆಲೆಯಲ್ಲಿ ಬಡತನವನ್ನು ಅವರ ಬಂಡವಾಳವನ್ನಾಗಿ ಮಾಡಿಕೊಂಡಿದ್ದಾರೆ.

ಇಂದಿನ ಸಾಮಾಜಿಕ ವ್ಯವಸ್ಥೆಯ ಸಂದರ್ಭದಲ್ಲಿ ಹೆಚ್ಚುತ್ತಿರುವ ಲೈಂಗಿಕ ಹಗರಣಗಳು, ಅತ್ಯಾಚಾರಗಳು, ಸ್ತ್ರೀ ಮೇಲಿನ ಎರಗುತ್ತಿರುವ ಆ್ಯಸಿಡ್ ದಾಳಿಗಳು ಮಹಿಳಾ ವರ್ಗಕ್ಕೆ ಭಯಭೀತವಾದ ವಾತಾವರಣವನ್ನು, ಸೃಷ್ಟಿ ಮಾಡಿವೆ. ಆದುದರಿಂದ ಇಂತಹ ಎಲ್ಲಾ ಸಾಮಾಜಿಕ ತಲ್ಲಣಗಳು ಪುರುಷನ ಪ್ರಾಬಲ್ಯತೆಯಿಂದ ಜರುಗುತ್ತಿವೆ. ಇಂತಹ ಸಮಸ್ಯೆಗಳಿಗೆ ತ.ರಾ.ಸು ಅವರ ಕಾದಂಬರಿಗಳು ಮುಕ್ತವಾದ ಚರ್ಚೆಗೆ ಪೂರಕವಾಗಿವೆ. ಸ್ತ್ರೀ ಸಂಬಂಧಿತ ಸಮಸ್ಯೆಗಳು ಎಳೆ ಎಳೆಯಾಗಿ ಬಿಡಿಸಬಾರದಷ್ಟು ಕಗ್ಗಂಟಾಗಿವೆ. ಬಡ ಮೇಷ್ಟ್ರಾದ ಶ್ರೀನಿವಾಸರಾಯ ಮತ್ತು ಕಮಲಮ್ಮನವರ ಮಗಳು ರತ್ನಮ್ಮ ಅನಾಥನಾದ ನೆರಮನೆಯ ಹುಡುಗನಾದ ಸೀತಾರಾಮನಿಗೆ ರತ್ನಮ್ಮನನ್ನು ವಿವಾಹ ಮಾಡಲಾಗುತ್ತದೆ. ಸಂಪ್ರದಾಯ ಹೇಳುವಂತೆ ಮೂಲ ನಕ್ಷತ್ರದಲ್ಲಿ ಜನಿಸಿದ ರತ್ನಮ್ಮನ ದುರಾದೃಷ್ಟವೆಂಬಂತೆ ಸೀತಾರಾಮು ಮರಣ ಹೊಂದುತ್ತಾನೆ. ಆತನ ಮರಣದ ಸಂದರ್ಭದಲ್ಲಿ ನಾಲ್ಕು ವರ್ಷದ ಮಗ ನಾರಾಯಣ ಎಂಬುವವನು ರತ್ನಮ್ಮನ ಪಾಲಿಗುಳಿಯುತ್ತಾನೆ. ಸೀತಾರಾಮು ತನ್ನ ಜೀವಿತಾವಧಿಯಲ್ಲಿ ಶ್ಯಾನುಭೋಗನಾಗಿದ್ದ ಕಾರಣ ಇತರರಿಗೆ ಸಹಾಯ ಮಾಡುವ ದೃಷ್ಟಿಯಿಂದ ಮಡದಿ ಮಕ್ಕಳಿಗಾಗಿ ಏನನ್ನು ಕೂಡಿಟ್ಟಿರುವುದಿಲ್ಲ. ಆದಷ್ಟು ಸಾಲದ ಬಾರವೇ ರತ್ನಮ್ಮನ ಪಾಲಿನದಾಗುತ್ತದೆ. ಇದೆಲ್ಲವನ್ನು ನಿಭಾಯಿಸ ಬಯಸುವ ರತ್ನಮ್ಮ ತನ್ನ ಮಗನ ಹಿತಾದೃಷ್ಟಿಯಿಂದ ಆಸ್ತಿ ಎಲ್ಲವನ್ನೂ ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಾಳೆ. ಈ ಮೂಲಕ ಹಳ್ಳಿಯಲ್ಲಿಯೇ ಉಳಿದು ಜೀವನ ಸಾಗಿಸುವುದು ಮುಂದುವರೆಯುತ್ತದೆ. ರತ್ನಮ್ಮನಿಗೆ ನೈಜ ಸಮಾಜದ ನಿಗೂಢತೆ ಅರ್ಥವಾಗುವುದೇ ತನ್ನ ಗಂಡನಾದ ಸೀತಾರಾಮು ಸತ್ತ ನಂತರ. ಈ ಹಿನ್ನೆಲೆಯಲ್ಲಿ ಅನಾಥೆಯಾದ ರತ್ನಮ್ಮನ ಬದುಕಿನ ಕಥೆ ತೆರೆದುಕೊಳ್ಳುತ್ತದೆ. ಗಂಡನ ಜೀವಿತಾವಧಿಯಲ್ಲಿ ನೋಡಿದ ಸಮಾಜಕ್ಕೂ ನಂತರ ನೊಡುವ ಸಮಾಜದ ದೃಷ್ಟಿಕೋನವೇ ರತ್ನಮ್ಮ ಬದುಕಿಗೆ ತಿರುವು ನೀಡುತ್ತದೆ. ಅನಾಥೆಯಾದ ರತ್ನಮ್ಮ ಸಮಾಜದ ವಿವಿಧ ಜನರ ಅಲೋಚನೆಗಳಿಗೆ ಮತ್ತು ಘರ್ಷಣೆಗಳಿಗೆ ಗುರಿಯಾಗಿ

ರತ್ನಮ್ಮ ಬದುಕಿನಲ್ಲಿ ಕರಗಿ ನೀರಾಗುವುದು ದುರಾದೃಷ್ಟಕರ. ರತ್ನಮ್ಮನ ಬೆಂಬಲಕ್ಕೆಂಬಂತೆ ರಾಘಣ್ಣ ಸಾಕಷ್ಟು ಸಹಾಯಹಸ್ತ ನೀಡುತ್ತಾನೆ. ಈ ನಡುವೆ ತಾನು ಗಂಡ ಮಾಡಿದ ಸಾಲ ತೀರುವ ವಿಷಯದಲ್ಲಿ ನಂಜಾಪುರದ ಶಾನುಭೋಗಿಕೆಯನ್ನು ಬಿಡಬೇಕಾಗುತ್ತದೆ. ಇಲ್ಲಿ ರತ್ನಮ್ಮ ಮತ್ತು ರಾಘಣ್ಣ ದೂರವಾಗುವ ಸಮಯ ಒದಗುತ್ತದೆ. ಇದೇ ಸನ್ನಿವೇಶವನ್ನು ದುರುಪಯೋಗ ಮಾಡಿಕೊಳ್ಳಬಯಸುವ ಚಿನ್ನೋಬಯ್ಯ ಹತ್ತಿರದವನಂತೆ ರತ್ನಮ್ಮನಿಗೆ ಕಾಣತೊಡಗುತ್ತಾನೆ. ಈ ಸಮಾಜ ವಿಧವೆಯನ್ನು ನೋಡುವ ದೃಷ್ಟಿಕೋನವೆಂಬಂತೆ ಚಿನ್ನೋಬಯ್ಯ ಮತ್ತು ರತ್ನಮ್ಮನ ಸಂಬಂಧವನ್ನು ತಪ್ಪಾಗಿ ಅರ್ಥೈಸಿಕೊಳ್ಳುತ್ತದೆ. ಇದನ್ನು ರತ್ನಮ್ಮನ ತಾಯಿಯಾದ ಕಮಲಮ್ಮ ಹಾಗೂ ರಾಘಣ್ಣನೇ ಹೆಚ್ಚು ನಂಬುವಂತೆ ಈ ವಿಷಯ ಕಾದಂಬರಿಯಲ್ಲಿ ಇಂಬು ಕೊಡುತ್ತದೆ. ಆದರೆ ಚಿನ್ನೋಬಯ್ಯನಿಗೆ ಈ ಮುಂಚೆ ಬೇರೆ ಭಾವನೆ ಇದ್ದರೂ ನಂತರ ಆ ಭಾವನೆ ಬೆಳೆಯಕೊಡದೆ ಬದಲಾವಣೆಯಾಗುತ್ತದೆ. ಆದರೂ ಇವರಿಬ್ಬರ ನಡುವಿನ ನೈಜ ಸಂಬಂಧವನ್ನು ಅರಿಯುವಲ್ಲಿ ಸಮಾಜ ವಿಫಲವಾಗುತ್ತದೆ. ತನ್ನ ಮತ್ತು ಚಿನ್ನೋಬಯ್ಯನ ಬಗ್ಗೆ ಸಮಾಜದ ಕೆಟ್ಟ ಅಪವಾದವನ್ನು ತಾಳಲಾರದೆ ರತ್ನಮ್ಮ ಬೇಸತ್ತು ಆತ್ಮಹತ್ಯೆಗೆ ಶರಣಾಗುವುದು ದುರಂತವೆನಿಸುತ್ತದೆ.

ಚಂದನದ ಗೊಂಬೆ ಕಾದಂಬರಿ ಒಂದು ಹೆಣ್ಣು, ವಿಧವೆಯಾದ ನಂತರ ಅನುಭವಿಸುವ ಮಾನಸಿಕ ದುಗುಡಗಳನ್ನು ಸೂಕ್ಷ್ಮವಾಗಿ ನಿರೂಪಿಸುತ್ತದೆ. ಹೆಣ್ಣನ್ನು ಶೋಷಿಸುವ ಗುಣ ಸಮಾಜದ್ದು. ಅಂದಿನಿಂದ ಇಂದಿನವರೆಗೂ ಅದು ನಿರಂತರವಾಗಿದೆ. ರತ್ನಮ್ಮನಿಗೆ ಇರುವ ಸ್ವಂತ ಜವಾಬ್ದಾರಿ ತನ್ನ ಮಗನನ್ನು ಸಲಹುವ ಕರ್ತವ್ಯ, ತನ್ನ ಗಂಡನಿಂದ ಉಳಿದ ಸಾಲ, ತಾನು ನಂಬಿದವರು ಆಕೆಯನ್ನು ನೋಡುವ ದೃಷ್ಟಿ ಇವೆಲ್ಲವೂ ಹೊಸ ಪ್ರಪಂಚದ ಅನುಭವವನ್ನು ನೀಡುತ್ತದೆ. ಆದರೂ ಬದುಕು ಮುಂದುವರೆಸುವ ಛಲ ರತ್ನಮ್ಮಳಿಗೆ ಇರುವುದು ಅಭಿನಂದನಾರ್ಹವಾದುದು. ರತ್ನಮ್ಮ ತನ್ನ ಗ್ರಾಮದವರೊಂದಿಗೆ, ಪ್ರೀತಿಯಿಂದ ವರ್ತಿಸಲು ಹೋಗಿ ಪ್ರೀತಿ, ಮಮತೆ ಮುಳ್ಳಾಗುತ್ತದೆ. ತಾನು ನಂಬಿದವರಾದ ಕಮಲಮ್ಮ, ಶ್ರೀನಿವಾಸರಾಯ, ರಾಘಣ್ಣ ಇವರೆಲ್ಲರಿಂದಲೂ ತಿರಸ್ಕೃತಳಾಗುತ್ತಾಳೆ. ಸಾಲದ ನೆಪದಿಂದಾಗಿ ಈರಮ್ಮನ ಶೋಷಣೆ ಬೇರೊಂದು ರೂಪ ಪಡೆದುಕೊಳ್ಳುವುದು ಅಸಹನೀಯವಾದುದು. ಒಂದು ವಿಧದಲ್ಲಿ ಒಬ್ಬ ವಿಧವೆಯನ್ನು ಯಾವ ಯಾವ ರೀತಿಯಲ್ಲಿ ಶೋಷಣೆ ಮಾಡಬಹುದೋ ಆ ಎಲ್ಲಾ ಆಯಾಮಗಳಲ್ಲಿ ಶೋಷಣೆಯನ್ನು ರತ್ನಮ್ಮ ಅನುಭವಿಸುತ್ತಾಳೆ. ಚಿನ್ನೋಬಯ್ಯ ಹಣ ಮತ್ತು ಕಾಮದ ದೃಷ್ಟಿಯಿಂದ ರತ್ನಮ್ಮಳ ಹತ್ತಿರವಾಗ ಬಯಸುತ್ತಾನೆ, ಚಿನ್ನೋಬಯ್ಯ ರತ್ನಮ್ಮನನ್ನು ನೋಡುವ ದೃಷ್ಟಿ, ವಿಠೋಬ ಹಾಗೂ ಈರಮ್ಮ ಇವರ ಸಂಬಂಧದ ಉಳಿವಿಗೆ ಬೇಕಾಗಿರುವ ಹಣ. ಈ ಹಣಕ್ಕಾಗಿ ಮಗಳು ರುದ್ರಿ, ಚಿನ್ನೋಬಯ್ಯನ ಕಾಮಕ್ಕೆ ಬಲಿಯಾಗುವುದು. ಈ ವರ್ತುಲಗಳು ಕಾದಂಬರಿಯಲ್ಲಿ ಸುಳಿಯಂತೆ ಸುತ್ತುತ್ತವೆ" ಇದರಿಂದ ಎರಡು ಅಂಶಗಳು ಸ್ಪಷ್ಟವಾಗುತ್ತವೆ. ಹಣದಿಂದ ಹೆಣ್ಣನ್ನು ತನ್ನವಳನ್ನಾಗಿಸಿ ಕಾಮತೃಷೆ ಈಡೇರಿಸಿಕೊಳ್ಳುವುದು ಹಾಗೆ ಹಣಗಳಿಸುವ ದೃಷ್ಟಿಯಿಂದ ಹೆಣ್ಣನ್ನು ಅಪವಾದಿತಳು ಮತ್ತು ದುರ್ಬಲಳನ್ನಾಗಿಸುವುದು ಸಮಾಜದಲ್ಲಿ ನಿರಂತರವಾದುದಾಗಿದೆ. ಈ ಕಾದಂಬರಿಯಲ್ಲಿ ಹೆಣ್ಣು ಹೆಣ್ಣನ್ನು ಶೋಷಣೆಗೆ ಒಳಮಾಡುವುದನ್ನು ಗುರುತಿಸಬಹುದು. ಇಲ್ಲಿ ತಾನೂ ಶೋಷಣೆ ಎಂಬ ಚಕ್ರವ್ಯೂಹದೊಳಗೆ ಸಿಲುಕಿದ್ದೇನೆಂಬ ಸಾಮಾನ್ಯ ಜ್ಞಾನವೂ ಇಲ್ಲದಾಗುತ್ತದೆ. ಅದು ಈರಮ್ಮ ಮತ್ತು ರುದ್ರಿಯಂತಹ ಹೆಣ್ಣುಗಳನ್ನು ನೋಡಿದಾಗ ಸ್ಪಷ್ಟವಾಗುತ್ತದೆ. ತಾಯಿಯಾದ ಈರಮ್ಮನು ತನ್ನ ಕಾಮತೃಷೆ ಮತ್ತು ವೈಯಕ್ತಿಕ

ಹಿತದೃಷ್ಟಿಗೆ ಮುಗ್ದೆಯಾದ ರುದ್ರಿಯನ್ನು ಬಲಿಪಶು ಮಾಡುತ್ತಾಳೆ. ಎಲ್ಲರೂ ಅಸಹಾಯಕರಾದಾಗ ಸ್ವಾರ್ಥ ಬದುಕಿಗೆ ಮಾರುಹೋಗುವುದು ಗೋಚರಿಸುತ್ತದೆ.

ರತ್ನಮ್ಮನಂತಹ ವಿಧವೆಯರ ಶೋಷಣೆ ಸಮಾಜದಲ್ಲಿ ನಿತ್ಯ ನಿರಂತರ, ಎಲ್ಲರೂ ಹೆಣ್ಣಿನ ಅಸಹಾಯಕ ಪರಿಸ್ಥಿತಿಯನ್ನು ದುರುಪಯೋಗ ಪಡಿಸಿಕೊಳ್ಳ ಬಯಸಿದಾಗ ಶೋಷಣೆಗೆ ಮುನ್ನುಡಿ ಎಂಬುದಕ್ಕೆ ಚಂದನದ ಗೊಂಬೆ ಕಾದಂಬರಿ ಉತ್ತಮವಾದ ನಿದರ್ಶನವಾಗಿದೆ. ಆದರೆ ಛಲಭರಿತವಾದ ಬದುಕಿನ ಹೋರಾಟ ನಡೆಸುವ ರತ್ನಮ್ಮ ಸಮಾಜದ ಅಪವಾದಗಳಿಗೆ ಕಿವಿಗೊಟ್ಟು ಆತ್ಮಹತ್ಯೆಗೆ ಶರಣಾಗುವುದು ಹೆಣ್ಣಿನ ದೌರ್ಬಲ್ಯವಾಗಿದೆ. ಈ ದುರ್ಬಲ ಮನಸ್ಸು ಹೆಣ್ಣುಗಳಲ್ಲಿ ತೊಲಗಬೇಕು. ಛಲಭರಿತವಾದ ಹೋರಾಟದ ಬದುಕು ಕಾಣಬೇಕು. ಈ ಮೂಲಕ ಸಮಾಜದಲ್ಲಿ ಮುಂದುವರೆಯದ ಹೆಣ್ಣಿನ ಶೋಷಣೆಗೆ ತಡೆ ನೀಡಬೇಕಿದೆ. ಪ್ರಗತಿಶೀಲತೆಯ ಸೋಗಿನಲ್ಲಿ ಸ್ತ್ರೀ ಸಂವೇದನಾತ್ಮಕತೆಯನ್ನು ಹೊರಹಾಕುವ ಪ್ರಮುಖ ಕಾಳಜಿ ತ.ರಾ.ಸು ಅವರ ಸಾಮಾಜಿಕ ಕಾದಂಬರಿಗಳಲ್ಲಡಗಿದೆ. ಕೌಟುಂಬಿಕ ಸಮಸ್ಯೆ, ದಾಂಪತ್ಯದ ಜೀವನ, ಪ್ರೀತಿ, ಪ್ರೇಮ, ಅಸಹಾಯಕತೆ, ಸ್ವಾತಂತ್ರ್ಯ ಈ ಎಲ್ಲಾ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ಕಾದಂಬರಿಗಳಿವೆ ಈ ಕಾದಂಬರಿಗಳ ಮೂಲವಸ್ತು ಹೆಣ್ಣೇ ಆಗಿರುವ ಈ ಎಲ್ಲಾ ಸಮಸ್ಯೆಗಳಿಗೆ ಸೂಕ್ತವಾದ ಪರಿಹಾರ ಕ್ರಮಗಳನ್ನು ಕಂಡುಕೊಳ್ಳುವುದು ಸರ್ಕಾರ ಮತ್ತು ಸಮಾಜದ ಜವಾಬ್ದಾರಿಯೂ ಹೌದು. ಹೆಣ್ಣಿನ ಮೂಲ ಸಮಸ್ಯೆ ಮತ್ತು ಸಂವೇದನೆಗಳು ಬೇರೆ ಬೇರೆ ವಿಧದಲ್ಲಿ ವ್ಯಕ್ತವಾಗುತ್ತದೆ. ಮಕ್ಕಳಿಲ್ಲದ ದಂಪತಿಗಳು ಮಗುವನ್ನು ಪಡೆಯುವ ಹಂಬಲವನ್ನು ವ್ಯಕ್ತಪಡಿಸುತ್ತಾರೆ. ಇದು ಒಂದು ನೆಲೆಯಾದರೆ. ಸ್ತ್ರೀ ಮಗುವನ್ನು ಪಡೆಯುವುದರಿಂದ ಸಂಕಷ್ಟಕ್ಕೆ ಸಿಲುಕುವುದಾದರೆ ಮಗುವಿನ ಅವಶ್ಯಕತೆಯೇನು? ಎಂಬುದು ಸಾಮಾಜಿಕ ಚಿಂತನೆಯ ನೆಲೆಗಟ್ಟು, ತಾಯಿ, ಮಡದಿ, ವೇಶ್ಯೆ, ಕನ್ಯೆ, ಮುಗ್ದೆ ಈ ಎಲ್ಲಾ ಪಾತ್ರಗಳಲಿಯೂ ತನ್ನದೇ ಆದಂತಹ ಭಾವನೆಗಳು ಅಡಗಿರುವುದರಿಂದ ಇವು ಇಲ್ಲಿ ಸಹಜವಾಗಿಯೇ ಮೂಡಿಬಂದಿದೆ.

ಆಧುನಿಕ ಯುಗದಲ್ಲಿಯೇ ಸಾಮಾಜಿಕ ಸಮಸ್ಯೆಗಳು ಶ್ರೀಸಾಮಾನ್ಯರನ್ನು ಕಾಡುತ್ತಿರುವುದು ದುರಂತ, ವಿಶೇಷವಾಗಿ ಹೆಣ್ಣನ್ನು ಒಳಗೊಂಡಿರುವುದು ಅಸಹನೀಯವಾದುದು. ಇಂದು ಶೈಕ್ಷಣಿಕ ರಂಗದಲ್ಲಿ ಮಹಿಳೆಯರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈ ಮೂಲಕ ಜ್ಞಾನ ಸಂಪಾದನೆ, ಕೌಶಲ್ಯಗಳ ಗಳಿಸುವಿಕೆ, ಬದುಕಿನ ಅರ್ಥೈಸುವಿಕೆ ಇವೆಲ್ಲವುಗಳ ನಡುವೆಯೇ ತಾಕಲಾಟಗಳಿಗೆ ಒಳಗಾಗುವಿಕೆ ಇದೆ. ಇದು ಈ ಸಮಾಜದ ವಾಸ್ತವ. ಕಾದಂಬರಿಯಲ್ಲಿ ಕಾಮ ಮತ್ತು ಹಣ ಹೆಣ್ಣನ್ನು ಶೋಷಿಸುವ ಪ್ರಮುಖ ಅಂಶಗಳೆಂಬುದು ಕಂಡುಬರುತ್ತದೆ. ಹಣ ಮತ್ತು ಕಾಮಗಳು ಕಾದಂಬರಿಯುದ್ದಕ್ಕೂ ಪಾತ್ರ ಪಾತ್ರಗಳ ಜೊತೆಗೆ ನಡೆಯುತ್ತದೆ. ಇದೊಂದು ವಿಷವರ್ತುಲ. ಕಾದಂಬರಿಯ ಕಥಾವೇಗ ಸುಂದರಾಗಿ ನಿರೂಪಿತವಾಗಿದೆ. ಗ್ರಾಮೀಣ ಬದುಕಿನ ಮಧ್ಯಮ ವರ್ಗದ ಬ್ರಾಹ್ಮಣ ಕುಟುಂಬದ ಕಥಾನಕವಿದು. ಪ್ರಗತಿಶೀಲ ಚಳುವಳಿಯ ತಾತ್ವಿಕ ನೆಲೆಗಿಂತ ತುಸು ಭಿನ್ನ. ಇಲ್ಲಿ 'ರೋಮ್ಯಾಂಟಿಕ್' ಭಾವ ತುಂಬಿದೆ. ಕಾದಂಬರಿಕಾರರು ಎಲ್ಲಕ್ಕಿಂತ ಹೆಚ್ಚಾಗಿ ಹೆಣ್ಣು, ಅವಳ ಹೋರಾಟ, ಅವಳ ಶೋಷಣೆ, ಈ ಹಿನ್ನೆಲೆಯಲ್ಲಿ ಸಮಾಜ ತನ್ನ ಮಾನವೀಯ ಮೌಲ್ಯಗಳನ್ನು ಕಳೆದುಕೊಳ್ಳುವದು, ಇವುಗಳ ಚಿತ್ರಣದತ್ತ ನಮ್ಮ ದೃಷ್ಟಿಯನ್ನು ಕೇಂದ್ರೀಕರಿಸಿರುವುದು ಮುಖ್ಯವಾಗಿದೆ.

'ಪಂಜರದ ಪಕ್ಷಿ' ಕಾದಂಬರಿಯಲ್ಲಿ ಮಧ್ಯಮ ಬಡವರ್ಗದ ಒಂದು ಸಂಸಾರದ ಚಿತ್ರಣವಿದೆ. ಒಂದು ಹೆಣ್ಣಿನ ಬದುಕಿನ ದುರಂತ ಚಿತ್ರಣ ಮನಮಿಡಿಯುವಂಥದ್ದು. ಕಾದಂಬರಿಯ ಮುಖ್ಯಪಾತ್ರ ಕೋಮಲೆಯದು. ತನ್ನ ಮನೆಯ ಹೊಟ್ಟೆಪಾಡಿಗಾಗಿ ದುಡಿಯುವ ಈಕೆ ಬಡತನದಿಂದಾಗಿ ಹಲವರ ಜವಾಬ್ದಾರಿ ಹೊತ್ತು, ತನ್ನ ಯೌವನ ಸಹಜವಾದ ಆಸೆ ಅಪೇಕ್ಷೆಗಳನ್ನು ಮೆಟ್ಟಿನಿಂತ ದುರಂತ ನಾಯಕಿ. ಗೋವಿಂದರಾಯ ಕೋಮಲೆಯ ತಂದೆ. ಕಡುಬಡವ, ಮೇಲೆ ಹೆಣ್ಣು ಸಂತಾನದ ಭಾರ ಬೇರೆ. ನಮ್ಮ ಸಮಾಜದಲ್ಲಿ ಗೋವಿಂದರಾಯನಂತಹವರು ಬೇಕಾದಷ್ಟು ಜನರಿದ್ದಾರೆ. ಕತ್ತಲು ತುಂಬಿದ ಗೋವಿಂದರಾಯನ ಬದುಕಿನಲ್ಲಿ ಕೋಮಲ ಒಬ್ಬಳೇ ಆಶಾಕಿರಣ. ಅವಳ ಮೇಲೆ ಆಧಾರವಾಗಿ ನಿಂತಿದೆ ಸಂಸಾರ. ಆ ಭಾರ ಹೊತ್ತು ಕರ್ತವ್ಯಪ್ರಜ್ಞೆ ತಳೆದ ಕೋಮಲ ಪಡುವ ಪಾಡು ನೋಡಿದರೆ ಕನಿಕರವೆಂದೆನಿಸುತ್ತದೆ. "ನಾನು ಹೆಂಗಸು ಅದೇ ಮನುಷ್ಯಳು? ನನ್ನನ್ನು ಸಾಕಿ ಸಲಹಿ ನೋಡು, ಬೆನ್ನಲ್ಲಿ ಬಿದ್ದೋರು ಕಷ್ಟಪಡ್ತಾ ಇದ್ದರೆ ನಾನು ಕಣ್ಣಿದ್ದೂ ಇಲ್ಲದೋಳ ಹಾಗೆ, ಯಾರು ಸತ್ತರೆ ನನಗೇನು ಅಂತ ಕೂತುಕೊಂಡಿರಲೇ? ಅಥವಾ ನನ್ನ ಸುಖಕ್ಕೆ ರಾಜಿಮಾಡಿ ಉರುಳು ಹಾಕಿಕೊಂಡು ಸಾಯಿರಿ ಅಂತಾ ಹೇಳಲೆ? ನನ್ನ ಹಣೇಲಿ ಮದುವೇಂತ ಬರೆದಿದ್ರೆ ಎಂದೋ ಹೇಗೋ ಆಗುತ್ತೆ. ಅದುವರೆಗೂ ಎಲ್ಲರಿಗೂ ಭಾರವಾಗಿರೋ ಬದಲು, ನನ್ನ ಕೈಯಿಂದ ಆದಷ್ಟು ಮಾಡಿ, ಈ ಮನೆಗೆ ಮಗಳಾಗಿ ಹುಟ್ಟಿದ್ದಕ್ಕೆ ಸಾರ್ಥಕವಾಯಿತು–ಅಂತಾನಾದ್ರೂ ಅನ್ನಿಸಿಕೋತೀನಿ" ಎನ್ನುವ ಕೋಮಲಳ ತುಮುಲ ಅರ್ಥವಾಗದಿರದು. ಜೊತೆಗೆ ವರದಕ್ಷಿಣೆಯ ಅವಾಂತರದಲ್ಲಿ ನರಳುವ ಹೆಣ್ಣು ಹೆತ್ತ ಬಡಕುಟುಂಬದ ಧ್ವನಿ ಇಲ್ಲಿ ಮೊಳಗಿದೆ.

ಕಾದಂಬರಿಕಾರರು ಕಾದಂಬರಿಯಲ್ಲಿ ಕೋಮಲಳ ಮೂಲಕ ಒಂದು ಹೆಣ್ಣಿನ ಅಸಹಾಯಕತೆಯನ್ನು ಎತ್ತಿತೋರಿದರೂ ಇನ್ನುಳಿದ ಪಾತ್ರಗಳ ಮೂಲಕ ಸ್ತ್ರೀ ಸ್ವಾತಂತ್ರ್ಯವನ್ನು ಪ್ರತಿಪಾದಿಸಿ ಹೆಣ್ಣು ಎಂದೂ ಗಂಡಿನ ದಾಸಳಲ್ಲ ಅವಳೂ ಸ್ವತಂತ್ರವಾಗಿ ಇರಬಲ್ಲಳೆಂದು ಪ್ರತಿಪಾದಿಸಿದ್ದಾರೆ. "ಹೆಣ್ಣಾಗಿ ಹುಟ್ಟಿದೋಳಿಗೆ ಗಂಡು ಸಿಗೋದೇ ಡಿಗ್ರಿ. ಮಕ್ಕಳಾಗೋದೆ ಡಾಕ್ಟ್ರೇಟ್, ಡ್ಯಾಂ, ನಾನ್‌ಸೆನ್ಸ್. ಹೆಂಗಸರೂಂದ್ರೆ ಈ ಜನ ಹೆರಿಗೆಯಂತ್ರ ಅಂತ ತಿಳಕೊಂಡಿದ್ದಾರೆ. ಅದಕ್ಕೆ ತಕ್ಕ ಹಾಗೆ ಒಬ್ಬ ಗಂಡು ಗೊತ್ತಾಗಿಬಿಟ್ರೆ ಆಗಿಹೋಯ್ತು ಗೌರಿಶಂಕರ ಶಿಖರ ಹತ್ತಿದ ಹಾಗೇ ಈ ಆ್ಯಟಿಟೂಡ್ ಶುದ್ಧ ಅಪಮಾನ". ಎಂದಿದ್ದಾರೆ ಮತ್ತೊಂದು ಕಡೆ. "ಇಷ್ಟವಿದ್ದಷ್ಟು ದಿನ ಓದಿ, ಲಕ್ಷಣವಾಗಿ ಸಂಬಳ ಬರೋ ಕೆಲಸ ಹಿಡಿದು, ಗಂಡಸರ ಹಾಗೆ ಮಜಾ ಮಾಡ್ತೀನಿ. ಯಾವನಿಗೋ ಕೂಳು ಕಟ್ಟಿಡಲಿಕ್ಕೆ ನನಗೇನು ತೆವಲೆ?" "ಶೀಲ–ನೀತಿ; ಇದೆಲ್ಲ ಕಾಕಮ್ಮನ ಕಥೆಗೆ ಹೆದರೋಕೆ ನಾನು ಹಸುಗೂಸಲ್ಲ. ಶೀಲ–ನೀತಿಯಲ್ಲ ಡ್ಯಾಂ, ನಾನ್‌ಸೆನ್ಸ್ ಅಂತ ಅನ್ನೋದು. ಅದಕ್ಕೆ ನನಗೆ ಅವುಗಳ ಭಯಾನೂ ಇಲ್ಲ". ತನ್ನ ಬಡತನ, ಸಂಸಾರ, ಜವಾಬ್ದಾರಿಯನ್ನು ಅರಿತು ಅದಕ್ಕಾಗಿ ತನ್ನ ಬದುಕನ್ನೇ ಗಂಧದ ಕೊರಡಿನಂತೆ ತೇಯ್ದು ಬದುಕಿದ ಕೋಮಲೆಯಂಥವರೂ ಸಮಾಜದಲ್ಲಿ ಇಲ್ಲದಿಲ್ಲ. ಕಾದಂಬರಿಯಲ್ಲಿ ತ.ರಾ.ಸು. ಅವರು ಸ್ವಚ್ಛಂದ ಪ್ರವೃತ್ತಿಯ ಹೆಣ್ಣನ್ನು ಒಂದು ಕಡೆ ತೋರಿಸಿ, ಸ್ವಚ್ಛಂದತೆಯೇ ಸ್ವಾತಂತ್ರ್ಯವಲ್ಲ ಎಂದು ಅರಿತು ತನ್ನ ಇತಿ–ಮಿತಿ ಪ್ರಜ್ಞೆಯಲ್ಲಿ ಬೆಳೆಯುವ ಹೆಣ್ಣನ್ನು ಇನ್ನೊಂದು ಕಡೆ ತೋರಿಸಿದ್ದಾರೆ. 'ಪಂಜರದ ಪಕ್ಷಿ' ಹೆಣ್ಣಿನ ಸೂಕ್ಷ್ಮಸಂವೇದನೆಯನ್ನು ಎಳೆಎಳೆಯಾಗಿ ಬಿಡಿಸಿಟ್ಟ ಕಾದಂಬರಿ

ಇಲ್ಲಿ 'ಸುಪ್ತ ಪ್ರಜ್ಞಾ ಪ್ರವಾಹ (Stream of inner consciousness) ತಂತ್ರವಿರುವುದನ್ನು ಕಾಣಬಹುದು.

'ಹೆಣ್ಣು ಕಟ್ಟಿದ ಮನೆ' ಕಾದಂಬರಿಯಲ್ಲಿ ಹೆಣ್ಣು ಸುಂದರ. ಅಷ್ಟೇ ವಿಚಿತ್ರ. ಜಗತ್ತಿನ ಆಗುಗಳಿಗೆಲ್ಲ ಅವಳ ಹಿನ್ನೆಲೆಯಿಲ್ಲದಿಲ್ಲ. ಸಾಮಾಜಿಕ, ಕೌಟುಂಬಿಕ ಜೀವನದಲ್ಲಿ ಅವಳ ಪಾತ್ರ ಬಹುಮುಖ್ಯ. ಅವಳು ಗಂಗೆ–ಗೌರಿಯಾಗಬಹುದು; ಚಂಡಿ–ಚಾಮುಂಡಿಯಾಗಬಹುದು. ಅವಳದೊಂದು ವಿಶಿಷ್ಟ, ಸಂಕೀರ್ಣಪಾತ್ರ. ಜೀವನದಲ್ಲಿ ಹೆಣ್ಣು ಅತ್ಯಂತ ವಿಲಕ್ಷಣವಾದ ಶಕ್ತಿ. ಕೌಟುಂಬಿಕ ಜೀವನದಲ್ಲಿ ತಾಯಿಯಾಗಿ, ಸೊಸೆಯಾಗಿ, ಮಗಳಾಗಿ, ಎಲ್ಲ ಅವಸ್ಥೆಗಳಲ್ಲಿ ಪುರುಷನ ಮೇಲೆ ತನ್ನ ಮುದ್ರೆಯನ್ನು ಒತ್ತುತ್ತಾಳೆ. ಅವಳ ಇದಿರು ಒಂದಿಲ್ಲೊಂದು ವಿಧದಲ್ಲಿ ಮಣಿಯದ ಪುರುಷ ಪ್ರಪಂಚದಲ್ಲಿಲ್ಲ. ಕಾದಂಬರಿಕಾರ ತ.ರಾ.ಸು. ಅವರು ಸಾಮಾನ್ಯ ಮಧ್ಯಮ ದರ್ಜೆಯ ಸಂಸಾರದಲ್ಲಿ ಹೆಣ್ಣು ಹೇಗೆ ಬದುಕುತ್ತಾಳೆ; ಆ ಹೆಣ್ಣಿನ ಸುತ್ತ–ಮುತ್ತ ನಡೆಯುವ ಘಟನೆಗಳು; ಆ ಘಟನೆಯ ಹಿನ್ನೆಲೆಯಲ್ಲಿ ಬದುಕು ಹೇಗೆ ಅರಳುತ್ತದೆ ಎನ್ನುವುದನ್ನು ತೋರಿಸಿದ್ದಾರೆ. ಕೌಟುಂಬಿಕ ಜೀವನದಲ್ಲಿ ಹೆಣ್ಣು ನಿಸ್ವಾರ್ಥತೆಯಿಂದ ಮನೆಯನ್ನು ಕಟ್ಟಿದರೆ, ಅದೇ ಹೆಣ್ಣಿನ ಇನ್ನೊಂದು ಮುಖ ಸ್ವಾರ್ಥಪರತೆಯಿಂದ ಒಂದು ಹೆಣ್ಣು ಕಟ್ಟಿದ ಮನೆಯನ್ನು ಹೇಗೆ ಒಡೆಯಬಹುದೆಂಬುದನ್ನು ತೋರಿಸಿದ್ದಾರೆ. ಸಂಸಾರ ಪ್ರಪಂಚಕ್ಕೆ ಹೆಣ್ಣು ಕೇಂದ್ರಬಿಂದು. ಅವಳ ಇಷ್ಟಾನಿಷ್ಟಗಳ ವರ್ತುಲದಲ್ಲಿ ಊಳಿದವರು ಸುತ್ತುತ್ತಿರುತ್ತಾರೆ. ನಾಲ್ಕು ಗೋಡೆಗಳ ಮಧ್ಯ ಬದುಕುವ ಒಂದು ಜೀವಂತ ಪ್ರಾಣಿ; ಪ್ರಪಂಚದ ಗೊಡವೆಗೆ ಹೋಗದೆ, ಎಲೆಮರೆಯ ಕಾಯಿಯಂತೆ ಬದುಕಿ, ಕೌಟುಂಬಿಕ ಬದುಕಿಗೆ ಕೊಡುವ ಕೊಡುಗೆ ಬಹುಮುಖ್ಯ.

ತ.ರಾ.ಸು. ಅವರು ಈ ಕಾದಂಬರಿಯಲ್ಲಿ ಹೆಣ್ಣಿನ ವಿಲಕ್ಷಣ ಶಕ್ತಿಯನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಸೃಷ್ಟಿಯ ಅನಂತ ಆಶ್ಚರ್ಯಕರ ಸೃಷ್ಟಿಯಲ್ಲಿ ಹೆಣ್ಣು ಒಂದು ವಿಲಕ್ಷಣ ಶಕ್ತಿಯೆಂಬುದನ್ನು ತಿಳಿಸುವುದೇ ಈ ಕಾದಂಬರಿಯ ಆಶಯವಾಗಿದೆ. ಒಂದು ಹೆಣ್ಣು ಮನೆಯನ್ನು ಕಟ್ಟುತ್ತದೆ; ಮತ್ತೊಂದು ಆ ಮನೆಯನ್ನು ಒಡೆಯುತ್ತದೆ. ಈ ಕಾದಂಬರಿಯಲ್ಲಿ ಮೂರು ಪ್ರಧಾನ ಪಾತ್ರಗಳು 'ನರಸಮ್ಮ', 'ವೆಂಕಟಮ್ಮ', 'ಭಾಗೀರಥಿ'. ಈ ಮೂವರಲ್ಲಿ ಸಾಮಾನ್ಯ ಸ್ತ್ರೀತ್ವದ ಗುಣಗಳಿವೆ. ಈ ಮೂವರೂ ಸ್ವಾರ್ಥಿಗಳು. ತಮ್ಮ ಚಿಂತೆಯನ್ನಲ್ಲದೆ ಲೋಕದ ಚಿಂತೆಯನ್ನು ಮಾಡಲಾರರು. ಮೂವರ ದೃಷ್ಟಿಯೂ ಒಂದೇ. ತಮ್ಮ ಸ್ವಾರ್ಥ ಸಾಧನೆ, ತಮ್ಮ ಸಂಸಾರ ರಕ್ಷಣೆ. ತನ್ನ ಬದುಕಿನ ಕುರಿತು ಚಿಂತಿಸುವುದಾಗಲಿ, ಅದನ್ನು ಕಾಪಾಡಿಕೊಂಡು ಹೋಗುವುದಕ್ಕೆ ಶ್ರಮಿಸುವದಾಗಲಿ, ಅದನ್ನು ನಾವು ಸ್ವಾರ್ಥವೆಂದು ಕರೆಯುತ್ತೇವೆ. ಆ ಸ್ವಾರ್ಥ ಸಂಸಾರಕ್ಕೆ ಕೆಟ್ಟದ್ದಲ್ಲ. ಅದು ಅನಿವಾರ್ಯ; ಅಗತ್ಯವೂ ಹೌದು. ಆದರೆ ಒಂದು ವ್ಯಕ್ತಿಯ ಸ್ವಾರ್ಥ ಮತ್ತೊಂದು ವ್ಯಕ್ತಿಯನ್ನು ಕೊಲೆಮಾಡುವದಕ್ಕೆ ಪ್ರಯತ್ನಪಟ್ಟಾಗ ಮಾತ್ರ ಘರ್ಷಣೆಯಾಗುವುದು. ನನ್ನ ಸ್ವಾರ್ಥ ಪರರಿಗೆ ಯಾವುದೇ ರೀತಿಯಲ್ಲಿ ಅಹಿತವಾಗದಿದ್ದರೆ ಅದು ಸ್ವಾಗತಾರ್ಹ. ಸಾಮಾನ್ಯ ಕುಟುಂಬದ ಕೇಂದ್ರ ಶಕ್ತಿಯಾದ ಹೆಣ್ಣಿನ "ಸ್ವಾರ್ಥ" ಉತ್ತಮವಾಗಿ, ಸಾತ್ವಿಕವಾಗಿ ಬೆಳೆದರೆ ಅದು ಹೇಗೆ ತನ್ನನ್ನು ಇತರರನ್ನು ಉದ್ಧಾರ ಮಾಡುತ್ತದೆಯೆನ್ನುವುದಕ್ಕೆ 'ನರಸಮ್ಮ'ನ ಪಾತ್ರ ನಿದರ್ಶನವಾಗಿದೆ. ಅದೇ ಸ್ವಾರ್ಥ ಅಲ್ಪವಾದರೆ ಕೆಡುಕನ್ನು

ಹೇಗೆ ಮಾಡುತ್ತದೆ ಎಂಬುದನ್ನು ವೆಂಕಮ್ಮ-ಭಾಗೀರಥಿಯರಲ್ಲಿ ಕಾಣುವದು. ಜೀವನ ಸ್ವಭಾವದ ಎರಡು ಮುಖಗಳನ್ನು ತ.ರಾ.ಸು. ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

**ಉಪಸಂಹಾರ**

ತ.ರಾ.ಸು ಅವರ ಸಾಮಾಜಿಕ ಕಾದಂಬರಿಗಳನ್ನು ಒಳಹೊಕ್ಕು ನೋಡಿದಾಗ, ಸಮಾಜದಲ್ಲಿ ಬಾಳಿ ಬದುಕಬೇಕಾಗಿರುವ ವ್ಯಕ್ತಿಯ ಆಶೆ-ಆಕಾಂಕ್ಷೆಗಳು, ಸಮಾಜದ ನಂಬಿದ ಮೌಲ್ಯಗಳಿಗೆ ಬಲಿಯಾಗುತ್ತಾ, ತನ್ನ ಜೀವನವನ್ನು ಹೇಗೆ ದುರುಂತದಲ್ಲಿ ಅಂತ್ಯಗೊಳಿಸಿಕೊಳ್ಳುತ್ತಾನೆ ಎಂಬುದನ್ನು ನಾಗರಹಾವು ಕಾದಂಬರಿಯಲ್ಲಿ ತಿಳಿದರೆ, ಬಿಡುಗಡೆಯ ಬೇಡಿ ಮತ್ತು ಚಂದನದ ಗೊಂಬೆ ಕಾದಂಬರಿಗಳು ಹೆಣ್ಣನ್ನು ಹೇಗೆ ಸಮಾಜ ತನ್ನ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತದೆ ಎಂಬುದನ್ನು ತಿಳಿದುಕೊಳ್ಳುತ್ತೇವೆ. ಸಮಾಜದಲ್ಲಿ ನೆಲೆಸಿರುವ ಕುಟುಂಬಗಳಲ್ಲಿನ ವೈವಿಧ್ಯಮಯ ಜೀವನ ಶೈಲಿಯನ್ನು ಗುರುತಿಸಬಹುದಾಗಿದೆ ಜೊತೆಗೆ ಹೆಣ್ಣಿನ ಮೇಲಿನ ಶೋಷಣೆ, ದರ್ಪ ಹಾಗೂ ಸ್ವಾರ್ಥಕ್ಕಾಗಿ ಆಕೆಯನ್ನು ಬಳಸಿಕೊಳ್ಳುವ ಪರಿಯನ್ನು ಗಮನಿಸಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- ಅಶೋಕ ಟಿ.ಪಿ. (1979). ನವ್ಯ ಕಾದಂಬರಿಯ ಪ್ರೇರಣೆಗಳು. ಬಾಪ್ಕೊ ಪ್ರಕಾಶನ, ಬೆಂಗಳೂರು.
- ಆಲೂರು ವೆಂಕಟರಾಯ. (1957). ಕರ್ನಾಟಕತ್ವದ ವಿಕಾಸ. ನವಜೀವನ ಗ್ರಂಥ ಭಂಡಾರ, ಧಾರವಾಡ.
- ಕೃಷ್ಣರಾಯ ಶಾ.ಮುಂ. (ಸಂ). (1982). ತ.ರಾ.ಸು ಬದುಕು-ಬರಹ. ವಿಶ್ವಭಾರತಿ ಪ್ರಕಾಶನ, ಮಡಗಾಂವ್, ಗೋವಾ.
- ಪಾಟೀಲ ಎಂ.ಎಸ್. (1991). ತ.ರಾ.ಸು. ಹಾಗೂ ಅವರ ಕಾದಂಬರಿಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
- ಶಿವರುದ್ರಪ್ಪ ಜಿ.ಎಸ್. (1977). ಸಾಹಿತ್ಯ ಮತ್ತು ಸಾಮಾಜಿಕ ಪ್ರಜ್ಞೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
- ಸಿದ್ದಲಿಂಗಯ್ಯ ಜಿ.ಎಸ್ ಮತ್ತು ಎಂ.ಎಚ್. ಕೃಷ್ಣಯ್ಯ. (1990). ಸಾಲುದೀಪಗಳು. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.